# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1014

ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್.

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 24.02.2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಾದ್ಯಂತ ಸಾರಿಗೆ ನಿಗಮವಾರು ಬಸ್ ನಿಲ್ದಾಣಗಳ/ಡಿಪೋಗಳ ಸಂಖ್ಯೆ ಎಷ್ಟು; ಇವುಗಳಿಗೆ ಒದಗಿಸಿದ ಸೌಲಭ್ಯಗಳ ವಿವರ ನೀಡುವುದು; | ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿರುವ ಬಸ್ ನಿಲ್ದಾಣಗಳ/ ಡಿಪೋಗಳ ಸಂಖ್ಯೆ ಕೆಳಕಂಡಂತಿದೆ:- <br><br> (see table below) <br><br> ಬಸ್ ನಿಲ್ದಾಣ/ಡಿಪೋಗಳಲ್ಲಿ ಒದಗಿಸಿರುವ ಸೌಲಭ್ಯಗಳ ವಿವರ ಕೆಳಕಂಡಂತಿದೆ:- <br><br> <u>ಕ.ರಾ.ರ.ಸಾ ನಿಗಮ:-</u> <br><br> **ಬಸ್ ನಿಲ್ದಾಣಗಳು:** ಪ್ರಮುಖ ಜಿಲ್ಲಾ, ತಾಲ್ಲೂಕು, ಹೋಬಳಿ ಮಟ್ಟದ ಬಸ್ ನಿಲ್ದಾಣಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಪುರುಷರು ಹಾಗೂ ಮಹಿಳೆಯರ ಶೌಚಾಲಯ, ಮಹಿಳಾ ವಿಶ್ರಾಂತಿಗೃಹ ಹಾಗೂ ಶಿಶು ಆರೈಕೆ ಕೊಠಡಿ, ವಾಣಿಜ್ಯ ಮಳಿಗೆ ಉಪಹಾರಗೃಹ, ವಿಶೇಷ ಚೇತನರಿಗೆ ರಾಂಪ್ ಹಾಗೂ ಶೌಚಾಲಯ ಪ್ರಯಾಣಿಕರ ಕಾಯುವ ಹಜಾರ, ಆಸನ ವ್ಯವಸ್ಥೆ, ದ್ವಿಚಕ್ರವಾಹನ ನಿಲುಗಡೆ ಇತ್ಯಾದಿ ಸೌಲಭ್ಯ ಒದಗಿಸಲಾಗಿದೆ. |

| ನಿಗಮ | ಬಸ್ ನಿಲ್ದಾಣಗಳು | ಬಸ್ ಘಟಕಗಳು |
|---|---|---|
| ಕ.ರಾ.ರ.ಸಾ ನಿಗಮ | 173 | 82 |
| ಬೆಂ.ಮ.ಸಾ.ಸಂಸ್ಥೆ | 53 | 48 |
| ವಾ.ಕ.ರ.ಸಾ.ಸಂಸ್ಥೆ | 176 | 55 |
| ಕ.ಕ.ರ.ಸಾ.ನಿಗಮ | 164 | 52 |

**ಬಸ್ ಘಟಕಗಳು:** ಪುರುಷರು ಹಾಗೂ ಮಹಿಳೆಯರ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಪ್ರತ್ಯೇಕ ಮಹಿಳಾ ಹಾಗೂ ಪುರುಷರ ವಿಶ್ರಾಂತಿಗೃಹ, ದ್ವಿಚಕ್ರ ವಾಹನ ನಿಲುಗಡೆ ಇತ್ಯಾದಿ ಸೌಲಭ್ಯ ಒದಗಿಸಲಾಗಿದೆ.

<u>ಬೆಂ.ಮ.ಸಾ.ಸಂಸ್ಥೆ:-</u>

**ಬಸ್ ನಿಲ್ದಾಣಗಳು:** ಪ್ರಯಾಣಿಕರು ಕಾಯುವ ಹಜಾರ, ಬಸ್ ಪ್ಲಾಟ್‌ಫಾರಂಗಳು, ಉಪಹಾರ ಗೃಹ, ಪಾರ್ಕಿಂಗ್ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯ, ಆಸನ ವ್ಯವಸ್ಥೆ, ವಾಣಿಜ್ಯ ಮಳಿಗೆಗಳು, ಜನರೇಟರ್ ವ್ಯವಸ್ಥೆ, ವಿಕಲಚೇತನರ ಶೌಚಾಲಯ ವ್ಯವಸ್ಥೆ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಲಾಗಿದೆ.

**ಬಸ್ ಘಟಕಗಳು:**

ಆಡಳಿತ ಕಛೇರಿ, ದುರಸ್ಥಿ ಅಂಕಣ, ಭದ್ರತಾ ಕೊಠಡಿ, ಸಂಚಾರ ಶಾಖೆ ಕೊಠಡಿ, ಉಗ್ರಾಣ, ಜನರೇಟರ್ ಕೊಠಡಿ, ವಿದ್ಯುತ್ ವ್ಯವಸ್ಥೆ, ವಾಹನ ಸ್ವಚ್ಛತಾ ವೇದಿಕೆ, ಮಹಿಳಾ ಮತ್ತು ಪುರುಷರ ವಿಶ್ರಾಂತಿ ಗೃಹ, ಮಹಿಳಾ ಮತ್ತು ಪುರುಷರ ಶೌಚಾಲಯ ವ್ಯವಸ್ಥೆ, ವಾಹನಗಳ ಪಾರ್ಕಿಂಗ್ ವ್ಯವಸ್ಥೆಗಳನ್ನು ಒದಗಿಸಲಾಗಿದೆ.

<u>ವಾ.ಕ.ರ.ಸಾ.ಸಂಸ್ಥೆ:-</u>

**ಬಸ್ ನಿಲ್ದಾಣಗಳು:** ಪ್ರಮುಖ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಬಸ್ ನಿಲ್ದಾಣಗಳಲ್ಲಿ ಉಪಹಾರ ಗೃಹ, ಪುರುಷ ಮತ್ತು ಮಹಿಳಾ ಪ್ರಯಾಣಿಕರ ಶೌಚಾಲಯ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಸಂಚಾರ ನಿಯಂತ್ರಕರ ಕೊಠಡಿ, ಮಹಿಳಾ ವಿಶ್ರಾಂತಿ ಗೃಹ ಹಾಗೂ ಶಿಶು ಆರೈಕೆ ಕೊಠಡಿ, ಮುಂಗಡ ಟಿಕೇಟ ಕಾಯ್ದಿರಿಸುವ ಕೌಂಟರ್, ವಾಣಿಜ್ಯ ಮಳಿಗೆಗಳು, ವಿಕಲಚೇತನರಿಗೆ ರ್‍ಯಾಂಪ್ ಹಾಗೂ ಶೌಚಾಲಯ ವ್ಯವಸ್ಥೆ, ಕ್ಲಾಕ್ ರೂಮ್, ಸಾಮಾನ್ಯ ಪ್ರಯಾಣಿಕರ ಕಾಯುವಿಕೆ ಪ್ರಾಂಗಣ (ವೇಟಿಂಗ್ ಹಾಲ್), ದ್ವಿಚಕ್ರ ವಾಹನಗಳ ನಿಲುಗಡೆ ಇತ್ಯಾದಿ ಸೌಲಭ್ಯ ಒದಗಿಸಲಾಗಿದೆ.

**ಬಸ್ ಘಟಕಗಳು:** ಪುರುಷ ಮತ್ತು ಮಹಿಳಾ ಪ್ರಯಾಣಿಕರ ಶೌಚಾಲಯ, ಶುದ್ಧ ಕುಡಿಯುವ ನೀರಿ

| | | |
|---|---|---|
| | | ನ ವ್ಯವಸ್ಥೆ, ಮಹಿಳಾ ಮತ್ತು ಪುರುಷ ಸಿಬ್ಬಂದಿಗಳ ಪ್ರತ್ಯೇಕ ವಿಶ್ರಾಂತಿ ಕೊಠಡಿ, ದ್ವಿಚಕ್ರ ವಾಹನಗಳ ನಿಲುಗಡೆ ಸ್ಥಳ ಇತ್ಯಾದಿ ಸೌಲಭ್ಯ ಒದಗಿಸಲಾಗಿದೆ.<br><br><u>ಕ.ಕ.ರ.ಸಾ.ನಿಗಮ:-</u><br><br>ಬಸ್ ನಿಲ್ದಾಣ ಮತ್ತು ಬಸ್ ಘಟಕಗಳಲ್ಲಿ ಉಪಹಾರ ಗೃಹ, ಪುರುಷ ಮತ್ತು ಮಹಿಳಾ ಪ್ರಯಾಣಿಕರ ಶೌಚಾಲಯ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಸಂಚಾರ ನಿಯಂತ್ರಕರ ಕೊಠಡಿ, ಮಹಿಳಾ ವಿಶ್ರಾಂತಿ ಗೃಹ ಹಾಗೂ ಶಿಶು ಆರೈಕೆ ಕೊಠಡಿ, ಮುಂಗಡ ಟಿಕೇಟ ಕಾಯ್ದಿರಿಸುವ ಕೌಂಟರ್, ವಾಣಿಜ್ಯ ಮಳಿಗೆಗಳು, ವಿಕಲಚೇತನರಿಗೆ ರ್‍ಯಾಂಪ್ ಹಾಗೂ ಶೌಚಾಲಯ ವ್ಯವಸ್ಥೆ, ಕ್ಲಾಕ್ ರೋಮ್, ಸಾಮಾನ್ಯ ಪ್ರಯಾಣಿಕರ ಕಾಯುವಿಕೆ ಪ್ರಾಂಗಣ (ವೇಟಿಂಗ್ ಹಾಲ್), ದ್ವಿಚಕ್ರ ವಾಹನಗಳ ನಿಲುಗಡೆ ಇತ್ಯಾದಿ ಸೌಲಭ್ಯ ಒದಗಿಸಲಾಗಿದೆ |
| ಆ. | ಹೆದ್ದಾರಿಗಳಲ್ಲಿ ರಾತ್ರಿ ಸಂಚರಿಸುವ ಬಸ್‌ಗಳು ನಿಲ್ಲುವ ಬಹುತೇಕ ಸ್ಥಳಗಳಲ್ಲಿ ಶೌಚಾಲಯವಿಲ್ಲದೇ ಮಹಿಳೆಯರಿಗೆ, ವಯೋವೃದ್ಧರಿಗೆ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮ ಏನು; ಅಥವಾ ಮುಂದಿನ ದಿನಗಳಲ್ಲಿ ಯಾವ ರೀತಿ ಕ್ರಮಕೈಗೊಳ್ಳಲಾಗುವುದು; | <u>ಕ.ರಾ.ರ.ಸಾ.ನಿಗಮ</u><br><br>ದೂರದ ಮಾರ್ಗಗಳಲ್ಲಿ ಕಾರ್ಯಾಚರಣೆಯಾಗುವ ಅನುಸೂಚಿಗಳಲ್ಲಿ ಬಸ್ಸುಗಳನ್ನು ನಿಲ್ಲಿಸಲು ಡಾಬಾಗಳನ್ನು ಗುರುತಿಸಲಾಗಿದೆ ಹಾಗೂ ಮಾರ್ಗ ಮಧ್ಯೆ ಬರುವ ನಿಗಮದ ಬಸ್ ನಿಲ್ದಾಣಗಳಲ್ಲಿ ನಿಲ್ಲಿಸಲು ಸೂಚಿಸಲಾಗಿರುತ್ತದೆ. ಸದರಿ ಡಾಬಾ ಹಾಗೂ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕ ಮಹಿಳೆಯರ ಮತ್ತು ವಯೋವೃದ್ಧ ಪ್ರಯಾಣಿಕರ ಉಪಯೋಗಕ್ಕಾಗಿ ಶೌಚಾಲಯಗಳು ಇರುತ್ತವೆ.<br><br><u>ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮ:-</u><br><br>ಸಂಸ್ಥೆಗಳ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಮೂತ್ರಾಲಯ/ಶೌಚಾಲಯ ವ್ಯವಸ್ಥೆ ಇರುತ್ತದೆ. ಹೆದ್ದಾರಿಗಳಲ್ಲಿ ರಾತ್ರಿ ಸಂಚರಿಸುವ ದೂರದ ಊರುಗಳಿಗೆ ಪ್ರಯಾಣಿಸುವ ಬಸ್ಸುಗಳು ರಸ್ತೆ ಬದಿಯಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಉತ್ತಮ ಸೌಲಭ್ಯ ಹೊಂದಿರುವ ಫಲಹಾರ ಮಂದಿರಗಳನ್ನು ಗುರುತಿಸಿ ಸಂಸ್ಥೆಯ ಅಧಿಕಾರಿಗಳಿಂದ ಪರಿವೀಕ್ಷಣೆ ಕೈಗೊಂಡು ಎಲ್ಲಾ ಮೂ |



Generated from eOffice by ...

| | | |
|---|---|---|
| | | ಲಭೂತ ಸೌಕರ್ಯಗಳನ್ನು ಹೊಂದಿರುವ ಹೋಟೇಲ್/ದಾಬಾಗಳಿಗೆ ಅನುಮತಿ ನೀಡಲಾಗುತ್ತಿದೆ. ಅಂತಹ ಹೋಟೇಲ್‌ಗಳಲ್ಲಿ ಶೌಚಾಲಯಗಳು ಉತ್ತಮವಾಗಿದ್ದು, ಅಗತ್ಯ ಶೌಚಾಲಯ ಸೌಲಭ್ಯ ಒದಗಿಸಲಾಗಿರುತ್ತದೆ. |
| ೩. | ಗೊರಗುಂಟೆಪಾಳ್ಯದಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ಲಲು ಪ್ರತ್ಯೇಕ ನಿಲ್ದಾಣ ಇಲ್ಲದೆ ಬಸ್‌ಗಳನ್ನು ಎಲ್ಲೆಂದರಲ್ಲಿ ನಿಲ್ಲಿಸಲಾಗುತ್ತಿರುವುದರಿಂದ ಪ್ರಯಾಣಿಕರು ಪರದಾಡುವಂತಾಗಿರುವುದು ನಿಜವೇ; ಅಲ್ಲದೇ ಬಿ.ಎಂ.ಟಿ.ಸಿ. ಬಸ್‌ಗಳು ಅದೇ ಮಾರ್ಗವಾಗಿ ಸಂಚರಿಸುವುದರಿಂದ ಟ್ರಾಫಿಕ್ ಸಮಸ್ಯೆಯು ಎದುರಾಗುತ್ತಿರುವುದು ನಿಜವೇ; ಅಲ್ಲಿ ಒಂದು ಕೆ.ಎಸ್.ಆರ್.ಟಿ.ಸಿ ಬಸ್ ನಿಲುಗಡೆಗೆ ಪ್ರತ್ಯೇಕ ಬಸ್ ನಿಲ್ದಾಣದ ಅವಶ್ಯಕತೆ ಇದ್ದು, ಈ ಬಗ್ಗೆ ಸರ್ಕಾರ ಯಾವ ಕಾಲಮಿತಿಯಲ್ಲಿ ಕ್ರಮ ಜರುಗಿಸಲಾಗುವುದು? | <u>ಕ.ರಾ.ರ.ಸಾ. ನಿಗಮ:-</u><br>ಗೊರಗುಂಟೆಪಾಳ್ಯದಲ್ಲಿ ರಸ್ತೆ ಬದಿಯಲ್ಲಿ ವೇ-ಸೈಡ್ ಬಸ್ ಶೆಲ್ಟರ್ ಇದ್ದು, ಸದರಿ ಬಸ್ ನಿಲ್ದಾಣದಲ್ಲಿ ಕ.ರಾ.ರ.ಸಾ. ನಿಗಮದ ಬಸ್ ನಿಲುಗಡೆ ನೀಡಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲಾಗುತ್ತಿದೆ.<br>ಪ್ರಸ್ತುತ ಗೊರಗುಂಟೆಪಾಳ್ಯದಲ್ಲಿ ನಿಗಮವು ಯಾವುದೇ ನಿವೇಶನ ಹೊಂದಿರುವುದಿಲ್ಲ ಹಾಗೂ ಪ್ರತ್ಯೇಕ ಬಸ್ ನಿಲ್ದಾಣ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ.<br><u>ಬೆಂ.ಮ.ಸಾ.ಸಂಸ್ಥೆ:-</u><br>ಬೆಂ.ಮ.ಸಾ.ಸಂಸ್ಥೆಯು ಗೊರಗುಂಟೆಪಾಳ್ಯ ಮಾರ್ಗವಾಗಿ ವಾಹನಗಳನ್ನು ವ್ಯವಸ್ಥಿತವಾಗಿ ಆಚರಣೆ ಮಾಡುತ್ತಿದ್ದು, ಗೊರಗುಂಟೆಪಾಳ್ಯ ಬಸ್ ನಿಲುಗಡೆಯ ಬಳಿ ನಿಯಮಿತವಾಗಿ ಸಾರಥಿ ಗಸ್ತು ಪಡೆಯನ್ನು ನಿಯೋಜಿಸಿ ನಿಗದಿತ ಬಸ್ ನಿಲುಗಡೆಯಲ್ಲಿ ಮಾತ್ರ ಬಸ್ಸುಗಳನ್ನು ನಿಲ್ಲಿಸಲು ಹಾಗೂ ಸಂಸ್ಥೆಯ ವಾಹನಗಳಿಂದ ಇತರೆ ಸಂಚಾರಕ್ಕೆ ಅಡಚಣೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ. |

ಸಂಖ್ಯೆ: ಟಿಡಿ 58 ಟಿಸಿಕ್ಯೂ 2023

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು



Generated from eOffice by B SRI... TRANSPORT MINISTER, ... on 24/02/2023 11:33 AM

Scanned with Oken